# ಮಕ್ಕಳ ಕಲ್ಯಾಣಕ್ಕೆ ಮೀಸಲಿಡದ ಹಣ: ವಿಷಾದ

**ಪ್ರಜಾವಾಣಿ ವಾರ್ತೆ**

ಬೆಂಗಳೂರು: 'ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಆರು ವರ್ಷದೊಳಗಿನ ಮಕ್ಕಳ ಕಲ್ಯಾಣಕ್ಕಾಗಿ ವಾರ್ಷಿಕ ಬಜೆಟ್‌ನಲ್ಲಿ ಮೀಸಲಿರಿಸುವ ಹಣ ತೀರಾ ಕಡಿಮೆ' ಎಂದು ಸೆಂಟರ್ ಫಾರ್ ಬಜೆಟ್ ಅಂಡ್ ಪಾಲಿಸಿ ಸ್ಟಡೀಸ್ (ಸಿ.ಬಿ.ಪಿ.ಎಸ್) ಸಂಶೋಧನಾ ಸಂಸ್ಥೆಯ ಪ್ರೊ.ವಿನೋದ್ ವ್ಯಾಸಲು ಹೇಳಿದರು.

ಸಂಸ್ಥೆ ಮಂಗಳವಾರ ಆಯೋಜಿಸಿದ್ದ ಬಜೆಟ್ ಪೂರ್ವ ಸಮಾಲೋಚನಾ ಕಾರ್ಯಾಗಾರದಲ್ಲಿ ಅವರು ಮಾತನಾಡಿದರು.

'ಪ್ರತಿ ಮನುಷ್ಯನ ಬದುಕಿನಲ್ಲಿ ಮೊದಲ ಆರು ವರ್ಷದ ಅವಧಿ ಬಹಳ ಮಹತ್ವದ್ದು. ಮಕ್ಕಳ ಬುದ್ಧಿಮತ್ತೆ ಹಾಗೂ ವಿಷಯಗ್ರಹಣ ಸಾಮರ್ಥ್ಯವು ಶಿಶುವಿನ ಶಾಲಾ ಪೂರ್ವ ಅವಧಿಯ ಪೋಷಣೆಯನ್ನು ಅವಲಂಬಿಸಿದೆ. ಆದರೆ, ಭಾರತದಲ್ಲಿ ಆರು ವರ್ಷದೊಳಗಿನ ಮಕ್ಕಳನ್ನು ನಿರ್ಲಕ್ಷಿಸಲಾಗುತ್ತಿದೆ ಎಂಬುದು ಅಧ್ಯಯನಗಳಿಂದ ಸಾಬೀತಾಗಿದೆ' ಎಂದರು.

ಮಕ್ಕಳ ಬೌದ್ಧಿಕ, ದೈಹಿಕ ಬೆಳವಣಿಗೆಯ ದೃಷ್ಟಿಯಿಂದ ಅಂಗನವಾಡಿ ಕೇಂದ್ರಗಳು ಪರಿಣಾಮಕಾರಿಯಾಗಿ ಕೆಲಸಮಾಡುವ ಅಗತ್ಯವಿದೆ. ಅಂಗನವಾಡಿ ಕೇಂದ್ರಗಳನ್ನು ಸಮರ್ಥವಾಗಿ ನಡೆಸುವುದು, ಶಿಶುವಿನ ಹಾಗೂ ಶಾಲಾ ಪೂರ್ವ ಅವಧಿಯ ಮಕ್ಕಳ ಶಿಕ್ಷಣ ನೀತಿಯನ್ನು ಅನುಸರಿಸುವುದು, ನ್ಯಾಯಮೂರ್ತಿ ಎನ್.ಕೆ. ಪಾಟೀಲ್ ನೇತೃತ್ವದ ಸಮಿತಿ ನೀಡಿದ ವರದಿಯನ್ನು ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಮುಂದಿನ ಬಜೆಟ್‌ನಲ್ಲಿ ಹೆಚ್ಚು ಹಣವನ್ನು ಮೀಸಲಿಡಬೇಕು ಎಂದು ಸರ್ಕಾರವನ್ನು ಒತ್ತಾಯಿಸಲಾಗುವುದು ಎಂದರು.

ಮೂರು ವರ್ಷ ಮೇಲ್ಪಟ್ಟ ಮಕ್ಕಳನ್ನು ಪ್ರಾಥಮಿಕ ಶಾಲೆಗೆ ಸೇರಿಸಿ ಮೂರು ವರ್ಷದೊಳಗಿನ ಮಕ್ಕಳನ್ನು ಮಾತ್ರ ಅಂಗನವಾಡಿಗಳಲ್ಲಿ ಉಳಿಸಿಕೊಳ್ಳಬೇಕು. ಅಂಗನವಾಡಿಗಳ ನಿರ್ವಹಣೆಯ ಜವಾಬ್ದಾರಿಯನ್ನು ಪಂಚಾಯತಿಗಳಿಗೆ ನೀಡಬೇಕು. ಅಂಗನವಾಡಿ ಉಸ್ತುವಾರಿ ಸಮಿತಿಗೆ ಸ್ವಯಂಸೇವಾ ಕಾರ್ಯಕರ್ತರನ್ನು ಸೇರಿಸಿಕೊಳ್ಳಬೇಕು. ಅಂಗನವಾಡಿ ಕಟ್ಟಡದಲ್ಲೇ ಕಾರ್ಯಕರ್ತೆಗೆ ಕೊಠಡಿ ವ್ಯವಸ್ಥೆ ಕಲ್ಪಿಸಬೇಕು. ಆರ್ಥಿಕ ಹೊರೆ ಕಡಿಮೆ ಮಾಡಲು ಐಟಿ ಕಂಪೆನಿಗಳಿಗೆ ತೆರಿಗೆ ವಿನಾಯಿತಿ ತೆಗೆದು ಹಾಕಬೇಕು. ಆಸ್ಪತ್ರೆ, ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಸೇವಾ ತೆರಿಗೆ ವಿಧಿಸುವ ಕಡೆಗೆ ಮುಂದಿನ ಆಯವ್ಯಯದಲ್ಲಿ ಗಮನಹರಿಸಬೇಕು ಎಂಬ ಸಲಹೆಗಳೂ ಸಭೆಯಲ್ಲಿ ವ್ಯಕ್ತವಾದವು.

ಈ ಸಲಹೆಗಳನ್ನು ಒಳಗೊಂಡ ವರದಿಯನ್ನು ಜನವರಿ 2ನೇ ವಾರದಲ್ಲಿ ಮುಖ್ಯಮಂತ್ರಿಗಳಿಗೆ ಸಲ್ಲಿಸಲಾಗುವುದು ಎಂದು ಸಿ.ಬಿ.ಪಿ.ಎಸ್ ಸಂಸ್ಥೆಯ ಸಲಹೆಗಾರ ಎ. ಶ್ರೀನಿವಾಸ್ ಹೇಳಿದರು.

ಬೆಂಗಳೂರಿನ ಬಾಸ್ಕೊ (ಬೆಂಗಳೂರು ಓಣಿಯವರ ಸೇವಾ ಕೂಟ), ಸಿವಿಕ್ ಸಂಸ್ಥೆ, ಬ್ರೆಡ್ಸ್ (ಬೆಂಗಳೂರು ಗ್ರಾಮಾಂತರ ಶಿಕ್ಷಣ ಹಾಗೂ ಅಭಿವೃದ್ಧಿ ಸಂಸ್ಥೆ), ಅಕ್ಷರ ಫೌಂಡೇಶನ್, ಸಾಮಾಜಿಕ ಪರಿವರ್ತನಾ ಜನಾಂದೋಲನ ಹಾಗೂ ಸೇವ್‌ದ ಚಿಲ್ಡ್ರನ್ ಸಂಸ್ಥೆಯ ಪ್ರತಿನಿಧಿಗಳು ಸಮಾಲೋಚನೆ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.